ಕರ್ನಾಟಕ ವಿಧಾನಸಭೆ

ಗುರುವಾರ 01 ನೇ ಆಗಸ್ಟ್ 1996ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್):- ಅವರು ಪೀಠವನ್ನು ಅಲಂಕರಿಸಿದ್ದರು.

(ವಿರೋಧ ಪಕ್ಷಗಳ ಸದಸ್ಯರು ಸದನದ ಬಾವಿಯಲ್ಲಿ ಧರಣಿ ಕುಳಿತಿದ್ದರು)

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:- ಶಾಸಕರಾದ ಶ್ರೀ ಮಂಜುನಾಥ್ ಸಿ. ಕುನ್ನೂರ್‌ರವರಿಗೆ ಅಸಿಸ್ಟೆಂಟ್ ಇಂಜಿನಿಯರಿಂದ ಕೊಲೆ ಬೆದರಿಕೆ.

ಅಧ್ಯಕ್ಷರು:- ಏಕೆ ಮತ್ತೆ ಎಲ್ಲರೂ ಸದನದ ಬಾವಿಗೆ ಬಂದಿದ್ದೀರಿ?

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ತಾವು ಅಧ್ಯಕ್ಷ ಪೀಠದಲ್ಲಿ ಇರಲಿಲ್ಲ. ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಕುಳಿತಿದ್ದಾಗ, ಮಾನ್ಯ ಶಾಸಕರಾದ ಶ್ರೀ ಮಂಜುನಾಥ್ ಸಿ. ಕುನ್ನೂರ್ ಅವರಿಗೆ ಎ.ಇ.ಇ. ಒಬ್ಬ, ನೀವೇನಾದರೂ ವಿಧಾನಸಭೆಯಲ್ಲಿ ಅಲ್ಲಿಯ ಅವ್ಯವಸ್ಥೆ ಬಗ್ಗೆ ಪ್ರಸ್ತಾಪ ಮಾಡಿದರೆ ನಾನು ನಿನ್ನನ್ನು ಶಾಸಕರ ಭವನದಲ್ಲೇ ಬಂದು ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದರು ಎನ್ನುವಂಥದ್ದು ಪ್ರಸ್ತಾಪ ಆಯಿತು. ಈ ಸದನದಲ್ಲಿ ಅನೇಕ ಸಂದರ್ಭಗಳಲ್ಲಿ ಮಾನ್ಯ ಶಿವಪ್ಪನವರ ಮೇಲೆ ಅದಂತಹ ಹಲ್ಲೆ ಬಗ್ಗೆ ನಾವು ಪ್ರಸ್ತಾಪ ಮಾಡಿದೆವು, ಮಾನ್ಯ ಅಪ್ಪಚ್ಚು ರಂಜನ್‌ರವರ ಮೇಲೆ ಅದಂತಹ ಹಲ್ಲೆ ಬಗ್ಗೆ ನಾವು ಪ್ರಸ್ತಾಪ ಮಾಡಿದೆವು. ಮಾನ್ಯ ಜಯರಾಮ ಶೆಟ್ಟಿಯವರಿಗೆ ಮತ್ತು ಮಾನ್ಯ ಸಭಾಪತಿಯವರ ಮೇಲೆ ಸುಳ್ಳು ಕೇಸನ್ನು ಹಾಕಿದ ಯಾವ ಒಬ್ಬ ಸಬ್ ಇನ್ಸಪೆಕ್ಟರ್ ಅನ್ನು ವರ್ಗಾವಣೆ ಮಾಡಿದ್ದರೋ, ಅವನನ್ನು ಮತ್ತೆ ಅಲ್ಲೇ ನೇಮಿಸಿ, ಅವರು ಅಲ್ಲಿ ಕಿರುಕುಳ ಅನುಭವಿಸುತ್ತಿರುವುದನ್ನು ಪ್ರಸ್ತಾಪ ಮಾಡಿದೆವು, ಮಾನ್ಯ ಬಸವರಾಜ್‌ರವರ ಪ್ರಕರಣದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದೆವು. ಈ ರೀತಿಯ ವಿಷಯಗಳನ್ನು ಇಲ್ಲಿ ಮತ್ತೆ ಮತ್ತೆ ಹೇಳಿದ್ದೇವೆ. ನಿರ್ಭೀತಿಯಿಂದ ಪ್ರಮಾಣಿಕವಾಗಿ ಪ್ರಜಾಸತ್ತಾತ್ಮಕವಾದ ವ್ಯವಸ್ಥೆಯಲ್ಲಿ ನಾವು ನಮ್ಮ ಕರ್ತವ್ಯವನ್ನು ನಿಭಾಯಿಸಲು ಆಗದಿರುವಂತಹ, ಉಸಿರು ಕಟ್ಟುವಂತಹ ಪರಿಸ್ಥಿತಿ ಬಂದಿದೆ ಎನ್ನುವಂಥದ್ದು ನಮ್ಮ ಉದ್ದೇಶ. ನಾನು 1983 ರಿಂದ ಶಾಸಕನಾಗಿದ್ದೇನೆ. ಇಲ್ಲಿ ನಿಂತುಕೊಂಡು ಯಾವುದೋ ಅಧಿಕಾರಿಯ ಕಿರುಕುಳದಿಂದ ನಾವು ಕೆಲಸ ಮಾಡಲಿಕ್ಕೆ ಆಗುವುದಿಲ್ಲ ಎನ್ನುವಂತಹ ಒಂದು ಪರಿಸ್ಥಿತಿ ಹಿಂದೆಂದೂ ನಮಗೆ ಬಂದಿರಲಿಲ್ಲ. ಅಲ್ಲಿ ಇಲ್ಲಿ ಘಟನೆಗಳಾದಾಗ, ಸರ್ಕಾರ ಅದರ ಬಗ್ಗೆ ಗಮನ ಕೊಡುತ್ತಿತ್ತು, ಅಲ್ಲೇ ಅದನ್ನು ಸರಿಪಡಿಸಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದು ಕೊಳ್ಳುವಂಥದ್ದು ಆಗುತ್ತಿತ್ತು. ಆದರೆ ಇತ್ತೀಚಿನ ದಿವಸಗಳಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಸರ್ಕಾರಿ